# ‘ಶ್ರೀರಾಮಕೃಷ್ಣ ವಚನವೇದ’ ಭಾವಧಾರೆ - 43

ಸ್ವಾಮಿ ನಿತ್ಯಸ್ಥಾನಂದ

## ಪಕ್ವಭಕ್ತಿ

**ಶ್ರೀರಾಮಕೃಷ್ಣರು:** ‘‘ಭಗವಂತನಲ್ಲಿ ಪ್ರೀತಿ ಉದಯವಾಗದವರೆಗೆ ಭಕ್ತಿ ಹಸಿಯಾಗಿರುತ್ತದೆ. ಅದು ಉಂಟಾಗಿಬಿಟ್ಟಿತು ಎಂದರೆ ಭಕ್ತಿ ಪಕ್ವವಾಗಿಬಿಡುತ್ತದೆ.

‘‘ಯಾರ ಭಕ್ತಿ ಇನ್ನೂ ಹಸಿಯೋ ಆತ ಭಗವತ್ಕಥಾ, ಉಪದೇಶ ಇವನ್ನು ಗ್ರಹಿಸಲಾರ. ಆದರೆ ಅದು ಪಕ್ವವಾಯಿತು ಎಂದರೆ ಗ್ರಹಿಸಬಲ್ಲ. ಫೋಟೋಗ್ರಾಫರನ ಗಾಜಿನ ಮೇಲೆ ಬೆಳ್ಳಿಯ ಉಪ್ಪನ್ನು(ಸಿಲ್ವರ್ ನೈಟ್ರೇಟ್) ಸವರಿದ್ದರೆ ಅದರ ಮೇಲೆ ಬಿದ್ದ ಪ್ರತಿಬಿಂಬ ಹಾಗೆಯೇ ಉಳಿದುಕೊಳ್ಳುತ್ತದೆ. ಆದರೆ ಬರೀ ಗಾಜಿನ ಮೇಲೆ ಸಹಸ್ರಾರು ಪ್ರತಿಬಿಂಬ ಬೀಳಲಿ ಅವೊಂದೂ ನಿಲ್ಲುವುದಿಲ್ಲ. ವಸ್ತು ಸರಿದು ಹೋಯಿತು ಎಂದರೆ ಅದು ಎಂದಿದ್ದಂತೇ ಇರುತ್ತದೆ. ಭಗವಂತನಲ್ಲಿ ಪ್ರೀತಿ ಇಲ್ಲದೇ ಇದ್ದರೆ, ಉಪದೇಶವನ್ನು ಗ್ರಹಿಸಲಾಗುವುದಿಲ್ಲ. *(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು. ೧೩೩)*

ಫೋಟೋಗ್ರಫಿ ಉದಾಹರಣೆಯನ್ನು ಇನ್ನೊಂದು ರೀತಿಯಲ್ಲಿಯೂ ಅರ್ಥೈಸಬಹುದು. ಗಾಜಿನ ಮೇಲೆ ಸಿಲ್ವರ್ ನೈಟ್ರೇಟ್ ಸವರಿದ್ದರೆ ಚಿತ್ರ ಅದರ ಮೇಲೆ ಮೂಡುತ್ತದೆ, ಇಲ್ಲದಿದ್ದರೆ ಇಲ್ಲ. ಹಾಗೆಯೇ ಆಸಕ್ತಿಯೊಂದಿಗೆ ಕರ್ಮ ಮಾಡಿದರೆ ಮನಸ್ಸಿನಲ್ಲಿ ಅದರ ಸಂಸ್ಕಾರ ಉಳಿಯುತ್ತದೆ. ಅನಾಸಕ್ತಿಯಿಂದ ಕರ್ಮ ಮಾಡಿದರೆ ಯಾವ ಸಂಸ್ಕಾರವೂ ಉಳಿಯುವುದಿಲ್ಲ. ಆಗ ಕರ್ಮಬಂಧನಾಗುವುದಿಲ್ಲ. ಮನಸ್ಸು ಗಾಜು ಇದ್ದಂತೆ ಹಾಗೂ ಸಿಲ್ವರ್ ನೈಟ್ರೇಟ್‌ಅನ್ನು ಆಸಕ್ತಿಗೆ ಹೋಲಿಸಬಹುದು. ಫೋಟೋ ತೆಗೆಯುವಾಗ ಕ್ಯಾಮರಾ ಸ್ಥಿರವಾಗಿ ಇರಬೇಕು. ಇಲ್ಲದಿದ್ದರೆ ಚಿತ್ರ ಅಸ್ಪಷ್ಟವಾಗಿ ಮೂಡುತ್ತದೆ. ಇದಕ್ಕೆ ಟ್ರೈಪಾಡ್ ಉಪಯೋಗಿಸುತ್ತಾರೆ. ಹಾಗೆಯೇ ಮನಸ್ಸಿನ ಸ್ಥಿರತೆಗೂ ಟ್ರೈಪಾಡ್ ಬೇಕು. ಅದಾವುದೆಂದರೆ ವೈರಾಗ್ಯ, ವಿಚಾರ ಮತ್ತು ಶ್ರದ್ಧೆ. ವೈರಾಗ್ಯವು ತೀವ್ರವಾಗಬೇಕಾದರೆ ವಿಚಾರ ಆವಶ್ಯಕ. ಶ್ರದ್ಧೆಯಿಲ್ಲದೆ ವಿಚಾರ ಮಾಡಿದರೆ ನಾಸ್ತಿಕ್ಯಭಾವ ಬಂದುಬಿಡಬಹುದು. ಆದ್ದರಿಂದ ಈ ಮೂರೂ ಇದ್ದರೆ ಮನಸ್ಸಿನಲ್ಲಿ ಭಗವದ್ ಭಾವವು ಸ್ಥಿರವಾಗುತ್ತದೆ, ಆಗ ಭಕ್ತಿ ಪಕ್ವವಾಗುತ್ತದೆ. ಶ್ರೀರಾಮಕೃಷ್ಣರು ಹೇಳುವಂತೆ, ಭಕ್ತಿ ಇನ್ನೂ ಹಸಿಯಾಗಿರುವಾಗ ಭಗವದ್ವಿಷಯವನ್ನು ಗ್ರಹಿಸಲಾಗುವುದಿಲ್ಲ, ಅದರಲ್ಲಿ ಆಸಕ್ತಿಯೂ ಕೆರಳುವುದಿಲ್ಲ. ಮಣ್ಣು ಹಸಿಯಾಗಿದ್ದರೆ ಬೀಸಣಿಗೆಯಿಂದ (ಈಗ ಫ್ಯಾನ್) ಗಾಳಿ ಹಾಕಿದರೆ ಅದು ಬೇಗ ಒಣಗುತ್ತದೆ. ವೈಧೀ ಭಕ್ತಿ ಎಂಬ ಬೀಸಣಿಗೆಯಿಂದ ಗಾಳಿ ಹಾಕಿದರೆ ಭಕ್ತಿ ಪಕ್ವವಾಗುತ್ತದೆ. ಬೀಸಣಿಗೆ ತಾನೇ ಗಾಳಿಯನ್ನು ಉತ್ಪತ್ತಿ ಮಾಡುವುದಿಲ್ಲ, ಇರುವ ಗಾಳಿಯನ್ನೇ ನಮ್ಮ ಕಡೆ ತಳ್ಳುತ್ತದೆ. ಹಾಗೆಯೇ ವೈಧೀ ಭಕ್ತಿಯು ಆಗಲೇ ನಮ್ಮಲ್ಲಿರುವ ಭಕ್ತಿಯನ್ನು ಕೆರಳಿಸುತ್ತದೆ. ಭಕ್ತಿಯೆಂದರೆ ಜೀವಾತ್ಮನಲ್ಲಿ ಸುಪ್ತವಾಗಿರುವ ಭಗವದ್ ವ್ಯಾಕುಲತೆ, ಹಂಬಲ.



ಭಕ್ತಿಯು ಪಕ್ವವಾದಾಗ ಭಗವಂತನ ಕಡೆಗಿರುವ ಆಕರ್ಷಣೆಯು ಜಾಸ್ತಿಯಾಗುತ್ತದೆ, ಬೇರೆ ಆಕರ್ಷಣೆಗಳು ಕಡಮೆಯಾಗುತ್ತವೆ. ಹಾಗೆಯೇ ಬೇರೆ ಆಕರ್ಷಣೆಗಳಿಂದ ನಾವು ಮುಕ್ತರಾದಷ್ಟು ಭಗವದಾಕರ್ಷಣೆ ಅಧಿಕವಾಗುತ್ತದೆ. ಕ್ಷಿಪಣಿಯು ಭೂಮಿಯ ಆಕರ್ಷಣೆಯಿಂದ ಮುಕ್ತವಾಯಿತು ಎಂದರೆ ಬೇರೆ ಗ್ರಹವು ಅದನ್ನು ಸೆಳೆದುಕೊಳ್ಳುತ್ತದೆ. ಸ್ವಾಮಿ ಯತೀಶ್ವರಾನಂದರು ಹೇಳುತ್ತಾರೆ: ‘‘ಯಾವ ವ್ಯಕ್ತಿಯನ್ನಾಗಲಿ ಅಥವಾ ಯಾರ ಪ್ರೀತಿಯನ್ನೇ ಆಗಲಿ ವೈಯಕ್ತಿಕವಾಗಿ ಹೊಂದುವ ಮನೋಭಾವವಿರಬಾರದು. ಹಾಗೆಯೇ ಬೇರೆಯವರೂ ಕೂಡ ನಮ್ಮ ಬಗ್ಗೆ ಆ ರೀತಿಯ ಮನೋಭಾವ ಹೊಂದಲು ಅವಕಾಶ ಕೊಡಬಾರದು... ಯಾವ ವ್ಯಕ್ತಿ ಬೇರೊಬ್ಬ ವ್ಯಕ್ತಿಯು ತನ್ನನ್ನು ದೇವರಿಗಿಂತ ಹೆಚ್ಚಾಗಿ ಪ್ರೀತಿಸಲು ಬಿಡುವನೋ ಅವನು ದೇವರಿಗೆ ಯೋಗ್ಯನಲ್ಲ, ಮತ್ತು ಅವನು ಎಷ್ಟೇ ಪ್ರಯತ್ನಿಸಿದರೂ ದೇವರನ್ನು ಪಡೆಯಲಾರ.’’

## ವಿಷಯಾಸಕ್ತಿ ಲೇಶಮಾತ್ರವೂ ಇರಕೂಡದು

**ಶ್ರೀರಾಮಕೃಷ್ಣರು:** ‘‘ವಿಷಯ ಬುದ್ಧಿ ಲೇಶಮಾತ್ರವಿದ್ದರೂ ಭಗವಂತನ ದರ್ಶನ ದೊರೆಯುವುದಿಲ್ಲ. ಬೆಂಕಿಕಡ್ಡಿ ಒದ್ದೆಯಾಗಿತ್ತು ಎಂದರೆ ಒಂದು ಸಾವಿರ ಸಲ ಗೀಚು ಒಂದೂ ಹತ್ತಿಕೊಳ್ಳುವುದಿಲ್ಲ. ಕೇವಲ ಒಂದು ರಾಶಿ ಬೆಂಕಿಕಡ್ಡಿಯ ನಷ್ಟ, ಅಷ್ಟೆ. ವಿಷಯಾಸಕ್ತ ಮನಸ್ಸು ನೆನೆದ ಬೆಂಕಿಕಡ್ಡಿ. ಒಮ್ಮೆ ಶ್ರೀಮತಿ (ರಾಧೆ) ತನ್ನ ಸಖಿಯರಿಗೆ ಹೇಳಿದಳು, ತನ್ನ ಕಣ್ಣಿಗೆ ಎಲ್ಲವೂ ಕೃಷ್ಣಮಯವಾಗಿ ಕಾಣುತ್ತಿದೆ ಎಂಬುದಾಗಿ. ಸಖಿಯರು ಹೇಳಿದರು: ‘ಎಲ್ಲಿ! ನಮಗೆ ಹಾಗೆ ಕಾಣುತ್ತಿಲ್ಲವಲ್ಲ! ನಿನಗೇನು ಬುದ್ಧಿ

ಭ್ರಮಣೆಯಾಗಿದೆಯೆ?' ಶ್ರೀಮತಿ ಹೇಳಿದಳು: 'ಸಖಿಯರೆ, ಅನುರಾಗವೆಂಬ ಅಂಜನವನ್ನು ಕಣ್ಣಿಗೆ ಹಚ್ಚಿಕೊಳ್ಳಿ, ಆಗೆ ನಿಮಗೆ ಆತ ಕಾಣುತ್ತಾನೆ.' ''

''ಈ ಅನುರಾಗ, ಈ ಪ್ರೇಮ, ಈ ಪಕ್ವ ಭಕ್ತಿ, ಈ ಪ್ರೀತಿ ಒಮ್ಮೆ ಉಂಟಾಯಿತು ಎಂದರೆ ಭಗವಂತನನ್ನು ಆತನ ಸಾಕಾರ ನಿರಾಕಾರ ರೂಪಗಳೆರಡರಲ್ಲೂ ನೋಡಬಹುದು.'' *(ಅಲ್ಲೇ, ಪು. ೧೩೩-೩೪)*

ಬೆಂಕಿಕಡ್ಡಿಯಿಂದ ಬೇರೆ ದೀಪ ಹೊತ್ತಿಸಬಹುದು. ಮಹಾತ್ಮರು ಒಣಗಿದ ಬೆಂಕಿಪೆಟ್ಟಿಗೆ ಇದ್ದಹಾಗೆ, ಅವರು ಅನೇಕರ ಜೀವನವನ್ನು ಬೆಳಗುತ್ತಾರೆ. ಸಾಮಾನ್ಯರು ಒದ್ದೆಯಾದ ಬೆಂಕಿಪೆಟ್ಟಿಗೆ ಇದ್ದ ಹಾಗೆ. ಎಷ್ಟೇ ಆಧ್ಯಾತ್ಮಿಕ ವಿಷಯ ಕೇಳಿದರೂ ಓದಿದರೂ ಅವರಲ್ಲಿ ಆಧ್ಯಾತ್ಮಿಕ ಜಾಗೃತಿ ಉಂಟಾಗುವುದಿಲ್ಲ. ನೆನೆದ ಬೆಂಕಿಪೆಟ್ಟಿಗೆಯನ್ನು ಕಾಯಿಸಿದರೆ ಅದೂ ಒಣ ಪೆಟ್ಟಿಗೆಯಾಗುತ್ತದೆ. ಸಾಧನೆ-ತಪಸ್ಸಿನ ಮೂಲಕ ನಮ್ಮಲ್ಲಿರುವ ಪ್ರಾಪಂಚಿಕ ತೇವವನ್ನು ತೆಗೆದುಹಾಕಬೇಕು. ಅಷ್ಟೇ ಅಲ್ಲದೆ ನೆನೆದಿರುವ ಬೆಂಕಿಪೆಟ್ಟಿಗೆಯನ್ನು ಸತ್ತ್ವಹೀನ ವ್ಯಕ್ತಿಗಳಿಗೆ ಹೋಲಿಸಬಹುದು – ಅವರಿಂದ ಒಳಿತೂ ಆಗದು, ಕೆಡುಕೂ ಆಗದು. ಒಣಗಿರುವುದರಿಂದ ಒಳಿತೂ ಆಗಬಹುದು, ಕೆಡುಕೂ ಆಗಬಹುದು.

ಅಕ್ಕಸಾಲಿಗನ ಅಂಗಡಿಗೆ ಗಿರಾಕಿಯೊಬ್ಬನು ಹೋಗುತ್ತಾನೆ. ಅಕ್ಕಸಾಲಿಗನು ಒಂದು ಬೆಳ್ಳಿಯ ಫಲಕವನ್ನು ಇಕ್ಕಳದ ಮೂಲಕ ಬೆಂಕಿಯಲ್ಲಿ ಕಾಯಿಸುತ್ತಿದ್ದನು. ಗಿರಾಕಿಯು 'ಏನು ಮಾಡುತ್ತಿರುವಿರಿ?' ಎಂದು ಕೇಳಿದನು. 'ಚೆನ್ನಾಗಿ ಕಾಯಿಸುತ್ತಿದ್ದೇನೆ.' 'ಕಾರಣ' ಮರು ಪ್ರಶ್ನೆ. 'ಅದನ್ನು ಶುದ್ಧಗೊಳಿಸಲು.' 'ಬೆಂಕಿಯಲ್ಲಿ ಹಾಗೆ ಹಾಕಬಹುದಲ್ಲ, ಇಕ್ಕಳದಲ್ಲಿ ಹಿಡಿದುಕೊಳ್ಳುವ ಆವಶ್ಯಕತೆಯೇನು?' ಗಿರಾಕಿಯ ಪ್ರಶ್ನೆ. 'ಹಾಗೆ ಮಾಡಿದರೆ ಅದು ಹೆಚ್ಚು ಕಾದು ಕರಗಿ ಹೋಗಬಹುದು.' 'ಅದು ಶುದ್ಧವಾಗಿದೆ ಎಂದು ನಿಮಗೆ ಹೇಗೆ ಗೊತ್ತಾಗುತ್ತದೆ?' ಅಕ್ಕಸಾಲಿಗ ಹೇಳಿದ: 'ಆ ಫಲಕದಲ್ಲಿ ನನ್ನ ಮುಖವು ಕಾಣಿಸಿಕೊಂಡರೆ ಅದು ಹದವಾಗಿ ಕಾದಿದೆ ಎಂದರ್ಥ.' ಹಾಗೆಯೇ ಸಾಧನೆಯ ಮೂಲಕ ಮನಸ್ಸು ಪರಿಶುದ್ಧವಾಗಿ ನಮ್ಮ ನಿಜಸ್ವರೂಪವು ಅದರ ಮೂಲಕ ಗೋಚರವಾಗುತ್ತದೆ. ಆಗ ಭಕ್ತಿಯು ಪಕ್ವವಾಗುತ್ತದೆ.

ಹಸಿ ಭಕ್ತಿಯು ಪಕ್ವವಾಗಬೇಕಾದರೆ, ಅದನ್ನು ಸಾಧನೆಯ ಮೂಸೆಯಲ್ಲಿ ಚೆನ್ನಾಗಿ ಬೇಯಿಸಬೇಕು. ಒಂದು ಮಣ್ಣಿನ ಮುದ್ದೆ ಮತ್ತು ಹುಳ ಇವು ಭಗವತ್ಪಾದವನ್ನು ತಲುಪಬೇಕೆಂದು ಬಯಸಿದವು. ಕುಂಬಾರನು ಮಣ್ಣಿನ ಮುದ್ದೆಯನ್ನು ತೆಗೆದುಕೊಂಡು ಅದನ್ನು ಹದಗೊಳಿಸಲು ಚೆನ್ನಾಗಿ ತುಳಿಯತೊಡಗಿದನು. ಮುದ್ದೆಯ ಸಂಕಟ ಹೇಳತೀರದು. ಇಷ್ಟಕ್ಕೇ ಮುಗಿಯುತ್ತದೆ ಎನ್ನುವಷ್ಟರಲ್ಲಿ ಕುಂಬಾರನು ಅದನ್ನು ಚಕ್ರದಲ್ಲಿ ಹಾಕಿ ತಿದ್ದಿತೀಡತೊಡಗಿದನು. ನಾನಿನ್ನು ಬದುಕಿರಲಾರೆ ಎನಿಸಿತು ಮುದ್ದೆಗೆ. ಅದಕ್ಕೆ ಈಗ ಒಂದು ಸುಂದರ ಹೂದಾನಿಯ ರೂಪ ಕೊಡಲಾಯಿತು. ಅದಕ್ಕೀಗ ತನ್ನ ಕಷ್ಟ ಮುಗಿಯಿತು ಎಂದೆನಿಸಿತು. ಅಯ್ಯೋ! ಈಗ ಅದನ್ನು ಚೆನ್ನಾಗಿ ಬೇಯಿಸಲು ಕುಲುಮೆಗೆ ಕಳಿಸಲಾಯಿತು. ಇಲ್ಲಿ ನನಗೆ ಉಳಿಗಾಲವಿಲ್ಲ ಎಂದು ಪರಿತಪಿಸತೊಡಗಿತು. ಈಗ ಅದು ಸುಂದರವಾದ ಗಟ್ಟಿಯಾದ, ಪಕ್ವವಾದ ಹೂದಾನಿ (Flower Pot)ಯಾಗಿ ಕಂಗೊಳಿಸತೊಡಗಿತು. ಅದನ್ನು ಹೂವಿನೊಂದಿಗೆ ಭಗವಂತನ ಪಾದದಡಿ ಇರಿಸಲಾಯಿತು. ಹುಳುವು ಇಷ್ಟೊಂದು ಕಷ್ಟಪಡುವ ಆವಶ್ಯಕತೆ ಏನಿದೆ ಎಂದು ಭಾವಿಸಿ, ಒಂದು ಸುಲಭೋಪಾಯವನ್ನು ಕಂಡುಹಿಡಿಯಿತು. ಅದು ಹೋಗಿ ಒಂದು ಹೂವಿನ ಮಧ್ಯೆ ಅವಿತುಕೊಂಡಿತು. ಪೂಜೆಗಾಗಿ ಹೂವನ್ನು ಬಿಡಿಸಿಕೊಂಡು ಹೋಗಿ, ಒಳ್ಳೆಯ ಹೂವುಗಳನ್ನು ಆರಿಸುತ್ತಿರುವಾಗ ಒಂದು ಹೂವಿನಲ್ಲಿ ಈ ಹುಳ ಅವಿತುಕೊಂಡಿರುವುದು ಪತ್ತೆಯಾಯಿತು. ಆ ಹೂವನ್ನು ಹಿಸುಕಿ ಬಿಸಾಕಲಾಯಿತು. ಅಲ್ಲಿಗೆ ಹುಳದ ಕತೆ ಮುಗಿಯಿತು. ಸುಲಭೋಪಾಯದಿಂದ ದುರ್ಲಭವಾದುದನ್ನು ಪಡೆಯಲಾಗುವುದಿಲ್ಲ.

### ಭಗವಂತ ಜ್ಞಾನಸೂರ್ಯ

**ಶ್ರೀರಾಮಕೃಷ್ಣರು:** ''ಆತ ಜ್ಞಾನಸೂರ್ಯ, ಕೇವಲ ಆತನ ಒಂದು ಕಿರಣವೇ ಈ ಜಗತ್ತಿಗೆ ಜ್ಞಾನದ ಬೆಳಕನ್ನು ಕೊಟ್ಟಿದೆ. ಆದ್ದರಿಂದಲೇ ನಮಗೆ ಒಬ್ಬರನ್ನೊಬ್ಬರು ಅರಿತುಕೊಳ್ಳಲು ಮತ್ತು ವಿವಿಧ ಜ್ಞಾನವನ್ನು ಸಂಪಾದಿಸಿಕೊಳ್ಳಲು ಸಾಧ್ಯವಾಗುತ್ತಿರುವುದು. ಆತ ತನ್ನ ಬೆಳಕನ್ನು ತಾನೇ ತನ್ನ ಮುಖದ ಮೇಲೆ ಬೀಳಿಸಿಕೊಂಡದ್ದೇ ಆದರೆ, ಆಗ ಮಾತ್ರ ಆತನ ಮುಖ ದರ್ಶನ ಪಡೆಯಬಹುದು.'' *(ಅಲ್ಲೇ, ಪು. ೧೩೪)*

ಶ್ರೀರಾಮಕೃಷ್ಣರ ಈ ಶ್ರೀವಾಣಿ ಕೇನೋಪನಿಷತ್ತಿನ ಕೆಳಗಿನ ಹೇಳಿಕೆಯನ್ನು ಪ್ರತಿಧ್ವನಿಸುತ್ತದೆ:

**''ಪ್ರತಿಬೋಧವಿದಿತಂ ಮತಂ...''** 'ಪ್ರತಿಯೊಂದು ಜ್ಞಾನವೂ ಆತ್ಮಜ್ಞಾನವೇ ಎಂದು ತಿಳಿದಾಗ ಅದೇ ನಿಜವಾದ ಜ್ಞಾನ.' ನಾವು ಕಣ್ಣಿನಿಂದ ಒಂದು ವಸ್ತುವನ್ನು ನೋಡುವಾಗ, ಸೂರ್ಯ ಅಥವಾ ದೀಪದ ಬೆಳಕು ಆ ವಸ್ತುವಿನ ಮೇಲೆ ಬಿದ್ದು, ಅದು ಪ್ರತಿಫಲಗೊಂಡು ನಮ್ಮ ಕಣ್ಣನ್ನು ತಲುಪುತ್ತದೆ. ಆಗ ಆ ವಸ್ತು ತೋರುತ್ತದೆ. ಆದ್ದರಿಂದ ನಾವು ಕಣ್ಣಿನಿಂದ ನೋಡುತ್ತಿರುವುದು ಬೆಳಕನ್ನೇ. ಹಾಗೆಯೇ, ಎಲ್ಲ ಜ್ಞಾನವೂ ನಮಗೆ ಚಿತ್ತವೃತ್ತಿಗಳ ಮೂಲಕವೇ ಆಗುವಂತಹುದು; ಚಿತ್ತವೃತ್ತಿಗಳ ಮೇಲೆ ಆತ್ಮನ ಬೆಳಕು ಬಿದ್ದು ಅದರ ಪ್ರತಿಫಲವೇ ವಿವಿಧ ಜ್ಞಾನಗಳಾಗಿ ತೋರುತ್ತದೆ. ಆದ್ದರಿಂದ ಎಲ್ಲ ಜ್ಞಾನವೂ ಆತ್ಮಜ್ಞಾನವೇ, ಜ್ಞಾನದ ವಸ್ತು ಬೇರೆ ಬೇರೆಯಾಗಿರಬಹುದು. ಆದ್ದರಿಂದಲೇ ಶ್ರೀರಾಮಕೃಷ್ಣರು ಹೇಳುತ್ತಿರುವುದು, ಭಗವತ್ಸೂರ್ಯನ ಒಂದು ಕಿರಣವೇ ಜಗತ್ತಿಗೆ ಜ್ಞಾನದ ಬೆಳಕನ್ನು ಕೊಟ್ಟಿದೆ, ಎಂದು.

ಎಲ್ಲ ವಸ್ತುಗಳ ಸತ್ಯತೆಯೂ ಆ ಭಗವಂತನೇ – ಅಲೆಗಳ ಸತ್ಯತೆ ಸಮುದ್ರ ಆಗಿರುವಂತೆ. ಎಲ್ಲ ಜ್ಞಾನವೂ ಭಗವಂತನ ಚಿತ್

ಸ್ವರೂಪ ಅಭಿವ್ಯಕ್ತಿಯೇ, ಎಲ್ಲ ಬಗೆಯ ಸುಖವೂ ಭಗವದಾನಂದದದ ಪ್ರತಿಫಲವೇ. ಆ ಪರಬ್ರಹ್ಮನಲ್ಲಿ ಆನಂದವಿಲ್ಲದಿದ್ದರೆ ಈ ಪ್ರಪಂಚದಲ್ಲಿ ಯಾರು ತಾನೆ ಸುಖವನ್ನು ಅನುಭವಿಸುತ್ತಿದ್ದರು ಎಂದು ಉಪನಿಷತ್ತು ಸಾರುತ್ತದೆ. ಅದ್ದರಿಂದಲೇ ಶಾಸ್ತ್ರವು ಭಗವಂತನನ್ನು ಸಚ್ಚಿದಾನಂದ ಸ್ವರೂಪ ಎಂದು ಕರೆಯುವುದು. ಈ ಮೂರು ಅಂಶಗಳು ಮನುಷ್ಯನಲ್ಲಿ ವಿವಿಧ ರೂಪಗಳಲ್ಲಿ ವ್ಯಕ್ತವಾಗುತ್ತವೆ. ಸತ್‌ಅಂಶವು ಸತ್ಯಾನ್ವೇಷಣೆಯ (Ontology) ರೂಪದಲ್ಲಿಯೂ ಚಿತ್ ಅಂಶವು ಜ್ಞಾನಾನ್ವೇಷಣೆಯ ರೂಪದಲ್ಲಿಯೂ (Epistemology) ಆನಂದಾಂಶವು ಸುಖಾನ್ವೇಷಣೆಯ (Aesthetic) ರೂಪದಲ್ಲಿಯೂ ವ್ಯಕ್ತವಾಗುತ್ತವೆ.

ಶ್ರೀರಾಮಕೃಷ್ಣರು ಸಾರ್ಜೆಂಟ್‌ನ ಉದಾಹರಣೆಯನ್ನು ನೀಡುತ್ತಾರೆ. ಅವನು ರಾತ್ರಿ ಪಹರೆ ತಿರುಗುವಾಗ ಒಂದು ದೀಪವನ್ನು ಹಿಡಿದುಕೊಂಡಿರುತ್ತಾನೆ. ಆ ದೀಪದಿಂದ ಎಲ್ಲವನ್ನೂ ಎಲ್ಲರನ್ನೂ ನೋಡುತ್ತಾನೆ. ಆದರೆ ಅವನು ಮಾತ್ರ ಕಾಣುವುದಿಲ್ಲ. ''ಆ ದೀಪವನ್ನು ನಿನ್ನ ಕಡೆಗೆ ತಿರುಗಿಸಿಕೊ, ನಿನ್ನನ್ನು ನೋಡಬೇಕು'' ಎಂದು ಕೇಳಿಕೊಳ್ಳಬೇಕು. ಹಾಗೆಯೇ ಜ್ಞಾನದ ಬೆಳಕನ್ನು ತನ್ನ ಕಡೆಗೇ ತಿರುಗಿಸಿಕೊ ಎಂದು ಭಗವಂತನನ್ನು ಪ್ರಾರ್ಥಿಸಿಕೊಳ್ಳಬೇಕು. ಅಂದರೆ ದೇವರ ಕೃಪೆಯಿಂದಲೇ ಅವನ ದರ್ಶನ ಸಾಧ್ಯ ಎಂಬುದನ್ನು ಶ್ರೀರಾಮಕೃಷ್ಣರು ಸೂಚಿಸುತ್ತಿದ್ದಾರೆ.

ಇನ್ನೊಂದು ದೃಷ್ಟಿಯಲ್ಲಿ ಹೇಳುವುದಾದರೆ: ಆತ್ಮನ ಬೆಳಕಿನಿಂದಲೇ ನಾವು ಎಲ್ಲ ಜ್ಞಾನವನ್ನೂ ಪಡೆಯುತ್ತಿರುವುದು. ನಾವು ಆತ್ಮಜ್ಞಾನವನ್ನು ಪಡೆಯಬೇಕಾದರೆ ಆ ಜ್ಞಾನದ ಬೆಳಕನ್ನು ಆತ್ಮನ ಕಡೆಗೇ ಹರಿಸಬೇಕು, ಹೊರಮುಖವಾಗಿ ಹರಿಯುತ್ತಿರುವ ಬೆಳಕನ್ನು ಒಳಮುಖವಾಗಿ ತಿರುಗಿಸಬೇಕು. ಈ ಭಾವನೆಯು ಕಠೋಪನಿಷತ್ತಿನ ಒಂದು ಮಂತ್ರವನ್ನು ನೆನಪಿಸುತ್ತದೆ:

**ಪರಾಂಚಿ ಖಾನಿ ವ್ಯತೃಣತ್ ಸ್ವಯಂಭೂಃ**
**ತಸ್ಮಾತ್ ಪರಾಙ್ ಪಶ್ಯತಿ ನಾಂತರಾತ್ಮನ್ ।**
**ಕಶ್ಚಿದ್ಧೀರಃ ಪ್ರತ್ಯಗಾತ್ಮಾನಮೈಕ್ಷತ್**
**ಆವೃತ್ತಚಕ್ಷುರಮೃತತ್ವ ಮಿಚ್ಛನ್ ॥**

''ಸೃಷ್ಟಿಕರ್ತನು ಇಂದ್ರಿಯಗಳನ್ನು ಹೊರಮುಖಗೊಳಿಸಿರುವನು. ಆದ್ದರಿಂದ ಮನುಷ್ಯನು ಹೊರಗಿರುವುದನ್ನೇ ನೋಡುತ್ತಾನೆ, ಅಂತರಾತ್ಮವನ್ನು ನೋಡುವುದಿಲ್ಲ. ಯಾವನೋ ಒಬ್ಬ ಜ್ಞಾನಿಯು ಅಮೃತತ್ವವನ್ನು ಬಯಸಿದವನಾಗಿ ತನ್ನ ದೃಷ್ಟಿಯನ್ನು ಒಳಮುಖಗೊಳಿಸಿ ಪ್ರತ್ಯಗಾತ್ಮನನ್ನು ನೋಡುತ್ತಾನೆ.'' *(ಕಠ, ೨.೧.೧)*

## ಹೃದಯದಲ್ಲಿ ಜ್ಞಾನದೀಪ

ಶ್ರೀರಾಮಕೃಷ್ಣರು: ''ಮನೆಯಲ್ಲಿ ಬೆಳಕು ಇಲ್ಲದೆ ಇತ್ತು ಎಂದರೆ ಅದು ದಾರಿದ್ರ್ಯದ ಲಕ್ಷಣ. ಆದ್ದರಿಂದ ಹೃದಯ ಮಧ್ಯದಲ್ಲಿ ಜ್ಞಾನದೀಪವನ್ನು ಹಚ್ಚಿ ಇಡಬೇಕು. ಒಂದು ಹಾಡಿನಲ್ಲಿ ಹೇಳಿರುವ ಹಾಗೆ:

ಹೃದಯ ಮಂದಿರದಲ್ಲಿ ಜ್ಞಾನದೀವಿಗೆ ಹಚ್ಚಿ
ಬ್ರಹ್ಮಮಯಿ ಮಾತಾಯಿ ಮುಖವ ನೋಡು

*(ವಚನವೇದ, ಸಂ.೧, ಪು.೧೭೫)*

ಹೃದಯಮಂದಿರದಲ್ಲಿ ಜ್ಞಾನದೀಪವನ್ನು ಹಚ್ಚಿ ಇಡಬೇಕು, ಮತ್ತು ಅದು ಯಾವಾಗಲೂ ಉರಿಯುತ್ತಿರಬೇಕು. ನಮ್ಮ ಆಗುಹೋಗುಗಳ ನಡುವೆ, ಸಾಂಸಾರಿಕ ಚಟುವಟಿಕೆಗಳ ನಡುವೆ ಆಗಾಗ ಒಳಗೆ ಇಣಿಕಿನೋಡಿ, ದೀಪ ಸರಿಯಾಗಿ ಉರಿಯುತ್ತಿದೆಯೇ ಇಲ್ಲವೆ ಎಂದು ನೋಡಿಕೊಳ್ಳಬೇಕು. ಆ ದೀಪ ನಮ್ಮ ಎಲ್ಲ ಚಟುವಟಿಕೆಗಳ ಮೇಲೆ ಬೆಳಕು ಚೆಲ್ಲಬೇಕು, ಅಧ್ಯಾತ್ಮ ಮಾರ್ಗದಿಂದ ದೂರ ಸರಿಯದಂತೆ ನೋಡಿಕೊಳ್ಳಬೇಕು. ಆ ದೀಪ ಸರಿಯಾಗಿ ಉರಿಯದಿದ್ದರೆ ಅದಕ್ಕೆ ಭಕ್ತಿಯ ತೈಲ ಹಾಕಬೇಕು. ಇಲ್ಲಿ ಮನಸ್ಸೇ ಬತ್ತಿ ಇದ್ದಂತೆ, ಆ ಬತ್ತಿಗೆ ಪ್ರಾಪಂಚಿಕತೆಯ ಕಾಡಿಗೆ ಹತ್ತುತ್ತದೆ. ಅದನ್ನು ತೆಗೆಯಬೇಕು. ಅಂದರೆ ಮನಸ್ಸೆಂಬ ಬತ್ತಿಯನ್ನು ಶುದ್ಧಗೊಳಿಸಬೇಕು. ಅನೇಕ ಕಷ್ಟನಷ್ಟಗಳ ಗಾಳಿಯಿಂದ ಆ ದೀಪ ಆರದಂತೆ ಶ್ರದ್ಧೆ ಎಂಬ ಗಾಜಿನ ಬುರುಡೆಯನ್ನು ಹಾಕಬೇಕು.

ಜ್ಞಾನದೀಪ ಯಾವಾಗಲೂ ಉರಿಯುತ್ತದೆ, ಆ ಬೆಳಕಿನಿಂದಲೇ ನಮಗೆ ಎಲ್ಲ ಬಗೆಯ ಜ್ಞಾನ ಉಂಟಾಗುತ್ತಿರುವುದು. ಸೂರ್ಯ ಯಾವಾಗಲೂ ಬೆಳಗುತ್ತಿದ್ದರೂ ಕತ್ತಲೆ-ಬೆಳಕುಗಳು ಉಂಟಾಗುತ್ತಿರುವುದು ಭೂಮಿಯ ಚಲನೆಯಿಂದ. ಹಾಗೆಯೇ ಮನಸ್ಸಿನ ಚಲನೆಯಿಂದ ಉಂಟಾಗುವ ಎಲ್ಲ ಬಗೆಯ ದ್ವಂದ್ವಗಳು ಮನಸ್ಸನ್ನು ಸ್ಥಿರಗೊಳಿಸುವುದಕ್ಕೆ ಇರುವ ಅಡಚಣೆಗಳು: ೧) **ವಿಷಯಾಸಕ್ತಿ ಲಕ್ಷಣಂ** - ಇಂದ್ರಿಯ ವಿಷಯಗಳ ಕಡೆ ಇರುವ ಆಕರ್ಷಣೆ ಎಲ್ಲವನ್ನೂ ತ್ಯಾಗ ಮಾಡಿದ್ದರೂ ವಿಷಯಾಸಕ್ತಿ ಸಂಪೂರ್ಣ ಬಿಟ್ಟು ಹೋಗಿರುವುದಿಲ್ಲ. ಅದು ಸೂಕ್ಷ್ಮ ರೂಪದಲ್ಲಿ ಇರುತ್ತದೆ ಮತ್ತು ಅಜ್ಞಾತವಾಗಿ ಮನಸ್ಸಿನ ಮೇಲೆ ಪ್ರಭಾವ ಬೀರುತ್ತಿರುತ್ತದೆ. ೨) **ಬುದ್ಧಿಮಾಂದ್ಯಂ** - ಉಪದೇಶಗಳನ್ನು ಸರಿಯಾಗಿ ಗ್ರಹಿಸುವ ಸಾಮರ್ಥ್ಯದ ಕೊರತೆ. ಇದಕ್ಕೆ ಬೌದ್ಧಿಕ ಶಿಸ್ತು, ಬೌದ್ಧಿಕ ಬೆಳವಣಿಗೆ ಅತ್ಯಂತ ಆವಶ್ಯಕ. ಆಧ್ಯಾತ್ಮಿಕ ವಿಷಯಗಳನ್ನು ಸರಿಯಾಗಿ ಗ್ರಹಿಸುವ ಸಾಮರ್ಥ್ಯ ಇರಬೇಕು. ವಿಷಯಾಸಕ್ತಿ ಇಲ್ಲದವರಿಗೆಲ್ಲ ಈ ಸಾಮರ್ಥ್ಯ ಇರುತ್ತದೆ ಎಂದು ಹೇಳಲಾಗುವುದಿಲ್ಲ. ವಿಷಯವಿರಾಗವೂ ಇರಬೇಕು, ಭಗವದನುರಾಗವೂ ಇರಬೇಕು. ೩) **ಕುತರ್ಕಂ** - ಚುರುಕು ಬುದ್ಧಿಯುಳ್ಳವರಲ್ಲಿ ಅನೇಕರು ಕುತರ್ಕಿಗಳಾಗಿರುತ್ತಾರೆ. ಅವರು ಯಾವುದನ್ನೂ ಒಪ್ಪಿಕೊಳ್ಳುವುದಿಲ್ಲ, ಸಂಶಯ ಬುದ್ಧಿಯುಳ್ಳವರು. ಇಂಥವರ ಬಗ್ಗೆಯೇ ಶ್ರೀಕೃಷ್ಣನು 'ಸಂಶಯಾತ್ಮಾ ವಿನಶ್ಯತಿ', ಎಂದು ಹೇಳಿರುವುದು. ಶ್ರದ್ಧೆಯ ಕೊರತೆಯಿಂದಾಗಿ ಅವರು ಮಾನಸಿಕವಾಗಿ ಪರಿತಪಿಸುತ್ತಾರೆ, ಮನೋರೋಗಕ್ಕೆ ಒಳಗಾಗುತ್ತಾರೆ. ೪) **ವಿಪರ್ಯಯ ದುರಾಗ್ರಹಃ** - ನಾನು ಪಂಡಿತ, ನಾನು ತಪಸ್ವಿ ಎಂಬ ಮಿಥ್ಯಾಭಿಮಾನ. *(ನೋಡಿ, Letters from Ramanashramam, P. ೨೫೫).* **(ಮುಂದುವರಿಯುವುದು)**